## ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 12

ಸಿ.ಡಬ್ಲ್ಯೂಃ 20

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ್ ಕುಮಾರ್ |
| ತಂದೆಯ ಹೆಸರು | ದಿಃ ಗೋವಿಂದ |
| ವಯಸ್ಸು | 40 ವರ್ಷ |
| ಉದ್ಯೋಗ | ಪಿ.ಎಸ್.ಐ , ಅಮಾಸೆಬೈಲು ಪೊಲೀಸ್ ಠಾಣೆ |
| ವಿಳಾಸ | ಅಮಾಸೆಬೈಲು |

ದಿನಾಂಕಃ 03-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಸೆಪ್ಟಂಬರ್ -2021 ರಿಂದ ಮೇ -2022 ರವರೆಗೆ ಪಡುಬಿದ್ರೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 25-02-2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 5.00 ಗಂಟೆಗೆ ಚಾಸಾ-1 ಇವರು ನೀಡಿದ ಲಿಖಿತ ದೂರು ನಿಶಾನೆ ಪಿ-1 ನ್ನು ನೀಡಿದ್ದು, ಅದನ್ನು ಸ್ವೀಕರಿಸಿ, ಅದನ್ನು ಠಾಣಾ ಗುನ್ನೆ ನಂಬ್ರ 22/2022 ಕ್ಕೆ ದಾಖಲಿಸಿದ್ದೆ. ಮೂಲ ವರ್ತಮಾನವನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದೆ. ಆ ದಿನ ನಾನು ದಾಖಲಿಸಿದ ಪ್ರಥಮ ವರ್ತಮಾನವನ್ನು ಈಗ ನೋಡಿ ಅದನ್ನು ಈಗ ನಿಶಾನೆ ಪಿ- 18 ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-18 (ಎ) ಎಂದು ಗುರುತಿಸಿದೆ. ನಿಪಿ-1 ರಲ್ಲಿರುವ ನನ್ನ ಹಿಂಬರಹ ಮತ್ತು ಸಹಿಯನ್ನು ಈಗ ನೋಡಿ ಅದನ್ನು ನಿಪಿ-1(ಬಿ) ಎಂದು ಗುರುತಿಸಿದ್ದೇನೆ. ನಂತರ ಮುಂದಿನ ತನಿಖೆಯ ಬಗ್ಗೆ ಕಡತವನ್ನು ಚಾಸಾ -21 ಇವರಿಗೆ ವಹಿಸಿಕೊಟ್ಟಿದ್ದೆ.

**ಪಾಟೀಸವಾಲು: ಆರೋಪಿ ಪರವಾಗಿ ಶ್ರೀ ಟಿ.ವಿ.ಕೆ.ಎಸ್ ವಕೀಲರಿಂದ**

1) ಎಸ್ ಸಿ/ಎಸ್ ಟಿ ದೌರ್ಜನ್ಯ ತಡೆ ಕಾಯಿದೆ ಬಿಟ್ಟು ಬರುವಂತಹ ಈ ರೀತಿಯ ಆರೋಪಗಳನ್ನು ದಾಖಲಿಸುವ ಮೊದಲು ಸತ್ಯಾಸತ್ಯತೆಯನ್ನು ತಪಾಸು ಮಾಡುತ್ತೇವೆ.

- ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.